ಆಧಾರವೋ ಈ ಗಣೇಶಯ್ಯನ ಆರೋಗ್ಯದ ಭವಿಷ್ಯ ಹೇಳುವುದಕ್ಕೂ ಅದೇ ಶಾಸ್ತ್ರವೇ ಆಧಾರ ತಾನೆ! ಹದಿನೈದೇ ದಿನದ ಅವಧಿಯನ್ನು ಅವನಿಗೆ ವಿಧಿಸಿರುವುದರಿಂದ ನಾನು ಈ ಲೋಕವನ್ನು ಬಿಡುವುದರೊಳಗೇ, (ಡಾ|| ಸಿಂಗ್ ಅವರ ಅಭಿಮತದಂತೆ) ಈ ಗಣೇಶಯ್ಯನ ಪರಿಸ್ಥಿತಿ ಸುಧಾರಿಸಲೇ ಬೇಕಲ್ಲ. ಅದು ನಿಜವಾಗುವುದಾದರೆ, ನನ್ನ ಸಾವು ನಿಶ್ಚಿತವೆಂದಾಗಲೇ ಬೇಕು. ಎಲ್ಲ ಬಿಟ್ಟು ಈ ಸಿಂಗ್ ಈ ನನ್ನ ಸಾವಿನ ವಿಷಯವನ್ನು ನನ್ನ ಹತ್ತಿರ ಏಕಿಷ್ಟು ತೆರೆದಿಟ್ಟರು? ಬೇರೇನಾದರೂ ಸುಳ್ಳನ್ನೇ ಹೇಳಬಹುದಿತ್ತಲ್ಲ 'ನೀವು ಇನ್ನೆರಡು ತಿಂಗಳು ಬಿಟ್ಟು ನನ್ನ ಬಳಿ ಬನ್ನಿ' ಎಂತಲೋ 'ಇನ್ನೆರಡು ತಿಂಗಳ ನಂತರ ನಿಮ್ಮ ಆರೋಗ್ಯ ಸ್ಥಿತಿ ಏರುಪೇರಾದೀತು' ಎಂದೋ ಅಥವಾ 'ಈ ಮಾತ್ರೆ, ಟಾನಿಕ್‌ಗಳನ್ನು ತಗೋಳ್ತಾ ಇರಿ... ಒಂದೆರಡು ತಿಂಗಳಿನ ನಂತರ ನೋಡೋಣ' ಎಂತಲೋ ನಯವಾದ ಮಾತಿನಲ್ಲಿ ನನ್ನನ್ನು ನಂಬಿಸಿ ಕಳಿಸಬಹುದಾಗಿತ್ತು. ಜ್ಯೋತಿಷ್ಯ ಶಾಸ್ತ್ರದಲ್ಲಿ ಒಂದು ನಿಷೇಧ ಸೂತ್ರವಿದೆಯಂತೆ –'ಯಾರ ಮರಣದ ಬಗ್ಗೆಯೂ ಭವಿಷ್ಯವನ್ನು ಬಹಿರಂಗಗೊಳಿಸಬೇಡ'. ಹೀಗೇ ವೈದ್ಯಶಾಸ್ತ್ರದಲ್ಲೂ ಸಹ ಈ ಮರಣದ ಬಗ್ಗೆ ನೇರವಾಗಿ ಏನನ್ನೂ ಹೇಳಬಾರದೆಂಬ ವಿಶೇಷ ಸೂತ್ರವಿದೆಯೋ ಹೇಗೋ ನಾನರಿಯೆ... ಒಂದು ವೇಳೆ ಈ ಸೂತ್ರ ಇಲ್ಲದಿದ್ದರೆ, ಇಂತಹ ಸೂತ್ರವನ್ನು ರಚಿಸಿಕೊಳ್ಳುವುದು ಒಳಿತೆನ್ನಿಸಿತು. ರೋಗಿಯ ಆತ್ಮವಿಶ್ವಾಸಕ್ಕೆ ಧಕ್ಕೆ ತರಬಾರದೆಂಬ ಸೂತ್ರ ಇದ್ದಂತೆ ಕಾಣುತ್ತದೆ. ಆದರೂ ಸಹ ಈ ಸಿಂಗ್ ಡಾಕ್ಟರು ಎಂಥ ಕೆಲಸ ಮಾಡಿಬಿಟ್ಟರು! ಇವರೇಕೆ ನನ್ನ ಸಾವಿನ ಬಗ್ಗೆ ಇಂಥ ಘೋರ ತೀರ್ಪನ್ನು ಜಾಹೀರುಗೊಳಿಸಿದರು? ನನಗೆ ಡಾಕ್ಟರರ ನುಡಿ ನಿಜವಾದೀತೇ ಇಲ್ಲವೇ ಎಂಬುದಕ್ಕಿಂತಲೂ ಈ ರೀತಿಯ ನೇರವಾದ ನುಡಿಯನ್ನು ಅವರು ಹೇಳಿ ಬಿಟ್ಟರಲ್ಲ ಎಂಬ ತಹತಹ ಹೆಚ್ಚಾಯಿತು. ಡಾ|| ಸಿಂಗ್ ಕೇವಲ ಹಣಕ್ಕಾಗಿ ನಕಲೀ ಗುಳಿಗೆಗಳನ್ನು ಮಾರಿ ಹೊಟ್ಟೆ ಹೊರೆಯುವವರಲ್ಲ. ಅವರು ಇಡೀ ಜಿಲ್ಲೆಗೆ ಹೆಸರಾದವರು. ತುಂಬಾ ಗಂಭೀರವಾದ ರೋಗಗಳನ್ನು ಸಹ ಅವರು ಗುಣಪಡಿಸಿದ ದಾಖಲೆಗಳಿವೆ. ಆರು ತಿಂಗಳ ಹಿಂದೆ ನನ್ನ ಸೋದರ ಸೊಸೆಯ ಮಗು ಪ್ರಾಣಾಂತಿಕ ರೋಗವೊಂದರಿಂದ ಉಳಿದುಕೊಂಡದ್ದೇ ಈ ಸಿಂಗ್ ಡಾಕ್ಟರಿಂದ... ಅವರ ಚಿಕಿತ್ಸೆಯ ಬಗ್ಗೆ ಯಾರಿಗೂ ಸಂಶಯ, ಅನುಮಾನ ಎಂಥದ್ದೂ ಇಲ್ಲ.

ಬಸ್ ಯಾವುದೋ ಹಳ್ಳಿಯ ಬಳಿ ನಿಂತಿತು. ರಾತ್ರಿಯ ವೇಳೆಯಾದುದರಿಂದ ಇಳಿಯುವವರೇ ಜಾಸ್ತಿ ಇದ್ದರು... 'ಬರ್ತೀನಿ ನಾನು. ನೀವೂ ಇಲ್ಲೇ ಇಳಿದುಬಿಡಿ– ಮನೆಗೆ ಹೋಗೋಣಂತೆ... ಇವತ್ತು ರಾತ್ರಿ ಆರಾಮಾಗಿದ್ದು ಬೆಳಿಗ್ಗೆ ಎದ್ದು ಹೋದರಾತು' ಎನ್ನುತ್ತ ಗಣೇಶಯ್ಯ ನನ್ನನ್ನು ತಿವಿದು ಹೇಳುತ್ತಿದ್ದರು. ಅರೆ! ಗಣೇಶಯ್ಯನ ಹಳ್ಳಿ ಬಂದೇ ಬಿಟ್ಟಿತೆ? ಎಂದು ಅಚ್ಚರಿಯಾಯ್ತು. 'ಇಲ್ಲ... ಇಲ್ಲ. ನಾನಿವತ್ತು ರಾತ್ರಿ ಊರು ಸೇರಲೇಬೇಕು' ಎಂದು ಗಣೇಶಯ್ಯನನ್ನು ನಿವಾರಿಸಿಕೊಂಡದ್ದಾಯ್ತು. ಅವನ ಪಾಡಿಗೆ ಅವನು ಬಸ್ಸಿನಿಂದಿಳಿದು, ಗೆಲುವಾಗಿ ಹೆಜ್ಜೆ ಹಾಕುತ್ತ ನಡೆದ. ಕೆಲವು ಜನಗಳು ಅಲ್ಲಿಯೇ ಇಳಿದುದರಿಂದ ನನಗೆ ಕೂಡಲು ಜಾಗ ಸಿಕ್ಕಿತು. ಬಸ್ ಹೊರಟ ನಂತರ ನನ್ನ ಯೋಚನೆಗಳು ಮತ್ತೆ ತಲೆ ಎತ್ತಿದವು. ಇದುವರೆಗೂ ನಾನು ನಿಂತು ಆ ಗದ್ದಲದಲ್ಲಿ ಯೋಚಿಸುತ್ತಿದ್ದೆನಾದುದರಿಂದ ನನ್ನ ಆಲೋಚನಾ ತರಂಗಗಳೆಲ್ಲ ಚದುರಿದಂತೆ ಆಗುತ್ತಿದ್ದವು. ಇದೀಗ ಒಂದು ಬೆಚ್ಚನೆಯ ಜಾಗ ಸಿಕ್ಕ ನನ್ನ ಆಲೋಚನೆಗಳೂ ಹೆಚ್ಚು ನಿಶ್ಚಿತವಾಗತೊಡಗಿದವು. ಡಾ|| ಸಿಂಗ್ ಅವರ ಈ ಭವಿಷ್ಯವಾಣಿಯನ್ನು ಸುಳ್ಳು ಎಂದು ಸುಲಭದಲ್ಲಿ ತಳ್ಳಿಹಾಕಲು ಸಾಧ್ಯವಿಲ್ಲ. ಇಂಥ ಗಂಭೀರ ವಿಚಾರಗಳನ್ನು ನಾಲಿಗೆಯ ಚಪಲಕ್ಕಾಗಿ ಯಾರೂ ಹೇಳಲಾರರು. ಸಿಂಗ್ ಅವರಂಥ ಉತ್ಕೃಷ್ಟ ಡಾಕ್ಟ್ರು ಈ ಮಾತನಾಡಿರಬೇಕಾದರೆ, ನನ್ನ